**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.787/2022**

| | | |
|---|---|---|
| ಸಾಕ್ಷಿದಾರರ ಹೆಸರು | : ಹರೀಶ್ | ಫ್ರಾಸಾ-4 |
| ತಂದೆಯ ಹೆಸರು | : ರೇವಣ್ಣ ಎಂ. | ಚಾಸಾ-6 |
| ವಯಸ್ಸು | : 31 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : RFO | ದಿನಾಂಕಃ12.08.2025 |
| ವಾಸಸ್ಥಳ | : ಕಡೂರು ವಲಯ | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನಾನು 2022 ರಿಂದ ಆಗಸ್ಟ 2024 ರವರೆಗೂ ಆಲ್ದೂರು ಅರಣ್ಯ ವಲಯದ RFO ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.31.05.2022 ರಂದು ಬೆ.11.00 ಗಂಟೆ ಸಮಯಕ್ಕೆ ಮೂಡಿಗೆರೆ ಅರಣ್ಯ ವಲಯದ ಗೋಡೋನ್ ಗೆ ಬೇಟಿ ನೀಡಿ ಅಲ್ಲಿ ಈ ಪ್ರಕರಣದ ಸಂಬಂಧ ಇರಿಸಿದ್ದ ಬೀಟೆ ಜಾತಿಯ ಎರಡು ನಾಟಗಳು ಮತ್ತು 10 ಸೈಜ್ ಗಳನ್ನು ಪರಿಶೀಲಿಸಿ ಸದರಿ ನಾಟ ಮತ್ತು ಸೈಜ್ ಗಳು ಬೀಟೆ ಜಾತಿಯದ್ದಾಗಿರುತ್ತದೆ ಎಂದು ದೃಢೀಕರಣ ಪತ್ರ ನೀಡಿರುತ್ತೇನೆ.

ಸಾಕ್ಷಿಯು ನಿಪಿ-11 ಮತ್ತು 12 ರಲ್ಲಿ ತಮ್ಮ ಸಹಿಗಳನ್ನು ಗುರುತಿಸಿದ್ದು ಅವುಗಳನ್ನು ನಿಪಿ-11(ಬಿ) ಮತ್ತು 12(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-5 ಮತ್ತು 6 ರಲ್ಲಿ ಕಾಣುವ ನಾಟ ಮತ್ತು ಸೈಜ್ ಗಳನ್ನು ನೋಡಿ ಅವುಗಳನ್ನೇ ಗೋಡೋನ್ ನಲ್ಲಿ ಪರೀಶಿಲಿಸಿರುವುದಾಗಿ ಗುರುತಿಸುತ್ತಾರೆ.

**ಪಾಟೀ ಸವಾಲು: 2 ನೇ ಆರೋಪಿ ಪರ ಶ್ರೀ ಹೆಚ್.ಜೆ.ಎ. ವಕೀಲರಿಂದ:**

ನಾನು ನಾಟ ಮತ್ತು ಸೈಜ್ ಗಳನ್ನು ಪರಿಶೀಲಿಸುವಾಗ ಪೋಟೋಗಳನ್ನು ತೆಗೆಯಲಾಗಿದೆ. ಈ ದಿನ ಅಂತಹ ಪೋಟೋಗಳನ್ನು ಗುರುತಿಸಿಲ್ಲ ಎಂದರೆ ಸರಿ. ನಿಪಿ-12 ರಲ್ಲಿ ದಿನಾಂಕಃ 31.05.2022 ಎಂದು ಕೈಬರವಣಿಗೆಯಲ್ಲಿ ಬರೆಯಲಾಗಿದೆ ಎಂದರೆ ಸರಿ. ನಾನು ಹೇಳಿದಂತೆ ಯಾವುದೇ ವಸ್ತುವನ್ನು ಪರಿಶೀಲಿಸದೇ ಇದ್ದರೂ ಸುಳ್ಳು ದೃಢೀಕರಣ ಪತ್ರ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ಮತ್ತು 7 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: 1 ನೇ ಆರೋಪಿ ಪರ ವಕೀಲರು 2 ನೇ ಆರೋಪಿ ಪರ ಆದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.**

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.